<u>ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ</u>

ಕ್ರಿ.ಮಿಸ್ ನಂ.1566/2023
ಪಿ.ಡಬ್ಲ್ಯೂ-01

ದಿನಾಂಕಃ 14/11/2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಶ್ರೀ. ಎಸ.ಎಮ್.ಆರ್. ಅರ್ಜಿದಾರರ ಪರ ವಕೀಲರಿಂದ:</u>

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ ಮತ್ತು ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯು ನಮ್ಮ ಮದುವೆಯ ಆಮಂತ್ರಣ ಪತ್ರಿಕೆ ಆಗಿರುತ್ತದೆ ಅದನ್ನು ಈಗ ನಿ.ಪಿ.-1 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಗಳು ಮದುವೆ ಕಾಲಕ್ಕೆ ತೆಗೆದ ಎರಡು ಫೋಟೊಗಳಾಗಿರುತ್ತವೆ. ಅವುಗಳನ್ನು ಈಗ ನಿ.ಪಿ.-2 ಮತ್ತು 3 ಎಂದು ಗುರುತಿಸಲಾಯಿತು.

<u>ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>

**( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.

<u>ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ</u>

ಕ್ರಿ.ಮಿಸ್ ನಂ.1566/2023
ಪಿ.ಡಬ್ಲ್ಯೂ-01

ದಿನಾಂಕಃ 30/11/2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ. ಎಸ.ಎಮ್.ಆರ್. ಅರ್ಜಿದಾರರ ಪರ ವಕೀಲರಿಂದ:</u>

ನನ್ನ ಅರ್ಜಿಗೆ ಪೂರಕವಾಗಿ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯ ಜಮೀನ ಸರ್ವೆ ನಂ.45/*/* ನೇದ್ದರ ಪಹಣಿ ಪತ್ರಿಕೆ ಆಗಿರುತ್ತದೆ. ಅದನ್ನು ಈಗ ನಿಪಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಿನಂತಿ.

ಪಾಟೀ ಸವಾಲು: ಎದುರುದಾರರ ಪರ ವಕೀಲರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಯಾವುದೇ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.

ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ

ಕ್ರಿ.ಮಿಸ್ ನಂ.1566/2023
ಪಿ.ಡಬ್ಲ್ಯೂ-01

ದಿನಾಂಕಃ 24/02/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ. ವಿ.ಕೆ.ಜೆ. ಎದುರುದಾರರ ಪರ ವಕೀಲರಿಂದ:

ನಾನು ಬಿ.ಎ.ಪದವಿಧರೆ. ನಾನು ಕಂಪ್ಯೂಟರ ಸ್ವಲ್ಪ ಕಲಿತಿರುತ್ತೇನೆ. ನಾನು ಕಿಯೋನಿಕ್ಸ ಕಂಪ್ಯೂಟರನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನನಗೆ ತಿಂಗಳಿಗೆ ರೂ.10000/- ಸಂಬಳವಿರುತ್ತದೆ ಎಂದರೆ ಸಾಕ್ಷಿಯು ತಿಂಗಳಿಗೆ 4-5 ಸಾವಿರ ಸಂಬಳ ಇರುತ್ತದೆ ದಿನಕ್ಕೆ 100 ರಿಂದ 150 ರೂಪಾಯಿ ಬರುತ್ತದೆ ಎಂದು ನುಡಿಯುತ್ತಾರೆ. ದಿನಕ್ಕೆ ರೂ.350 ಸಂಪಾದನೆ ಇರುತ್ತದೆ ಎಂದರೆ ಸರಿಯಲ್ಲ.

ಮದುವೆಯಾದ ಮೇಲೆ ನಾನು ಮತ್ತು ಎದುರುದಾರನು ಸುಮಾರು 1 ರಿಂದ 2 ತಿಂಗಳು ಮಾತ್ರ ಸರಿಯಾಗಿದ್ದೆವು. ನಂತರ ಎದುರುದಾರನು ಜಗಳ ಮಾಡಲು ಪ್ರಾರಂಭಿಸಿರುತ್ತಾನೆ. ನಾನು ತವರು ಮನೆಗೆ ಹೋಗಿ ಮರಳಿ ಬರಲಿಲ್ಲ ಎಂದರೆ ಸರಿಯಲ್ಲ. 1 ತಿಂಗಳ ನಂತರ ನಾನೇ ಎದುರುದಾರನೊಂದಿಗೆ ಬೇರೆ ಮನೆ ಮಾಡೋಣ ಅಂತಾ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನಗೆ ಹುಮನಾಬಾದನಲ್ಲಿ ಬೇರೆ ಮನೆ ಮಾಡಿ ಇಟ್ಟಿರುತ್ತಾರೆ ಎಂದರೆ ಸರಿ.

ಈಗಲೂ ಎದುರುದಾರನು ನನಗೆ ಕರೆದುಕೊಂಡು ಹೋಗಲು ಸಿದ್ದನಿರುತ್ತಾನೆ ಎಂದರೆ ಸಾಕ್ಷಿಯು ನನ್ನ ಜೀವಕ್ಕೆ ಅಪಾಯವಿರುತ್ತದೆ ಎಂದು ನುಡಿಯುತ್ತಾರೆ. ನಾನೇ ಎದುರುದಾರನಿಗೆ ಸಾಕುತ್ತೇನೆ ಹುಮನಾಬಾದನಲ್ಲಿ ಇರು ಅಂತಾ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ರೂ.2,00,000/- ಹಣ, 2 ತೊಲೆ ಬಂಗಾರ ನೀಡಿದ ಬಗ್ಗೆ

ರಶೀದಿ ಇರುವುದಿಲ್ಲ. ಮದುವೆಯಾದ ನಂತರ ನನಗೆ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಅಂತಾ ಎದುರುದಾರನು ಕಿರುಕುಳ ನೀಡಿರುತ್ತಾನೆ ಅಂತಾ ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ತಂದೆ ತಾಯಿ ಎದುರುದಾರನ ಮನೆಗೆ ಹೋಗಿ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ, ನನ್ನ ಅತ್ತೆ, ಮಾವ ಮತ್ತು ನಾದಿನಿ ಬೈದಿರುತ್ತಾರೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನ ನಂ.2 ಮತ್ತು 3 ರವರನ್ನು ಎದುರುದಾರನು ಸರಿಯಾಗಿ ನೋಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ. 2 ಮಕ್ಕಳಾದ ನಂತರ ಎದುರುದಾರನು 3 ಲಕ್ಷ ಹಣ ವರದಕ್ಷಿಣೆ ತೆಗೆದುಕೊಂಡು ಬಾ ಅಂತಾ ಬೇಡಿಕೆ ಇಟ್ಟಿರುತ್ತಾನೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರನು ನಮ್ಮ ಮನೆಗೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ನನಗೆ ಹೊಡೆ ಬಡೆ ಮಾಡಿ ಒದ್ದಿರುವ ಕಾರಣ ನನಗೆ ಗರ್ಭಪಾತ ಆಗಿರುತ್ತದೆ. ಒಂದು ಮಗುವಾದ ನಂತರ ನಾನು ಎದುರುದಾರನೊಂದಿಗೆ ವೈವಾಹಿಕ ಜೀವನ ನಡೆಸಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಹುಮನಾಬಾದಿಗೆ ಬಂದಿಲ್ಲ, ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರ ನಂ.2 ಮತ್ತು 3 ರವರನ್ನು ಸಾಕುವಷ್ಟು ಆದಾಯ ಹೊಂದಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಎದುರುದಾರನು ಮೋಬೈಲನಿಂದ ಕರೆ ಮಾಡಿ ಬೈದಿರುತ್ತಾನೆ ಅಂತಾ ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನ ಹತ್ತಿರ ಮೊಬೈಲ ಇಲ್ಲ ಎಂದರೆ ಸರಿಯಲ್ಲ. ಎದುರುದಾರನ ಹೆಸರಿನಲ್ಲಿ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ತಂದೆಯ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಎದುರುದಾರನ

ಜಮೀನ ಸರ್ವೆ ನಂಬರ ನನಗೆ ಗೊತ್ತಿಲ್ಲ. ನನ್ನ ಅರ್ಜಿಯಲ್ಲಿ ಸರ್ವೆ ನಂಬರಗಳನ್ನು ಬರೆಯಿಸಿರುತ್ತೇನೆ. ಸದರಿ ಜಮೀನನಿಂದ ತಿಂಗಳಿಗೆ ರೂ.50,000/- ಆದಾಯ ತೊಗರಿ, ಅಕ್ಕಿ, ಕಬ್ಬು ಬೆಳೆಗಳಿಂದ ಬರುತ್ತದೆ. ಸದರಿ ಬೆಳೆಗಳು ವರ್ಷಕ್ಕೊಮ್ಮೆ ಬರುತ್ತವೆ ಎಂದರೆ ಸರಿ. ಸದರಿ ಜಮೀನಿಗಳಿಂದ ಎದುರುದಾರನಿಗೆ ಅಷ್ಟು ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಪ್ರತಿ ತಿಂಗಳು ಜೀವನಾಂಶ ನೀಡಲು ಸಮರ್ಥನಿರುತ್ತಾನೆ ಅಂತಾ ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರನು ಕೂಲಿ ಕೆಲಸ ಮಾಡಿ 150 ರಿಂದ 200 ಪ್ರತಿದಿನ ಗಳಿಸುತ್ತಾನೆ ಎಂದರೆ ಸಾಕ್ಷಿಯು ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರನು ಯಾವುದೇ ಕಂಪನಿ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.